203. ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಬೀದರ್) ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ರಾಜ್ಯದಲ್ಲಿ ಹೊಸದಾಗಿ ಪ್ರಾರಂಭಿಸಲಾದ ವೈದ್ಯಕೀಯ ಕಾಲೇಜುಗಳ ಸಂಖ್ಯೆ ಎಷ್ಟು; ಈ ಪೈಕಿ ಯಾವ ಯಾವ ಕಾಲೇಜುಗಳು ಕಾರ್ಯ ನಿರ್ವಹಿಸುತ್ತವೆ;

(ಆ) ಈ ಕಾಲೇಜುಗಳ ನಿರ್ಮಾಣ ಮತ್ತು ಸ್ಥಾಪನೆಗಾಗಿ ಇಲ್ಲಿಯವರೆಗೆ ವೆಚ್ಚ ಮಾಡಲಾದ ಹಣವೆಷ್ಟು (ಕಾಲೇಜುವಾರು ವಿವರಗಳನ್ನು ಒದಗಿಸುವುದು);

(ಇ) ಈ ಕಾಲೇಜುಗಳಲ್ಲಿ ಎಷ್ಟು ವಿದ್ಯಾರ್ಥಿಗಳಿಗೆ ಪ್ರವೇಶವನ್ನು ಕಲ್ಪಿಸಲಾಗಿದೆ;

(ಈ) ಸದರಿ ಕಾಲೇಜುಗಳಲ್ಲಿ ನೇಮಕಾತಿ ಮಾಡಿಕೊಂಡಿರುವ ವೈದ್ಯರು ಹಾಗೂ ಇತರೆ ವರ್ಗದ ಸಿಬ್ಬಂದಿಯ ಸಂಖ್ಯೆ ಎಷ್ಟು; ಈ ನೇಮಕಾತಿಯನ್ನು ಮಾಡಿಕೊಳ್ಳುವ ಸಂದರ್ಭದಲ್ಲಿ ನಿಯಮಗಳನ್ನು ಅನುಸರಿಸಲಾಗಿದೆಯೇ (ಕಾಲೇಜುವಾರು ವಿವರಗಳನ್ನು ಒದಗಿಸುವುದು);

(ಉ) ಈ ಪೈಕಿ ಕೆಲವು ಕಾಲೇಜುಗಳಲ್ಲಿ ನೇಮಕಾತಿ ಮಾಡಿಕೊಳ್ಳುವ ಸಂದರ್ಭದಲ್ಲಿ ವ್ಯಾಪಕವಾದ ಭ್ರಷ್ಟಾಚಾರ ನಡೆದಿದೆ ಎನ್ನುವ ಬಗ್ಗೆ ದೂರುಗಳಿರುವುದು ನಿಜವೇ;

(ಊ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು;

(ಋ) ಯಾವ ಯಾವ ಕಾಲೇಜುಗಳಿಗೆ ಎಂ.ಸಿ.ಐ ಭೇಟಿ ನೀಡಿ ಪರಿಶೀಲಿಸಿ ತನ್ನ ಅಂತಿಮ ಒಪ್ಪಿಗೆಯನ್ನು ನೀಡಿದೆ; ಹಾಗೂ ಯಾವುದರ ಬಗ್ಗೆ ದೂರುಗಳನ್ನೇದಾರೂ ಸರ್ಕಾರಕ್ಕೆ ಸಲ್ಲಿಸಿದೆಯೇ?

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

(ಅ) ಎಲ್ಲಾ 6 ಕಾಲೇಜುಗಳು ಕಾರ್ಯ ನಿರ್ವಹಸುತ್ತಿವೆ.

(ಆ) ವಿವರಗಳು ಈ ಕೆಳಕಂಡಂತಿದೆ:

1	ಮಂಡ್ಯ	ರೂ. 58. 5167315 ಕೋಟಿ
2	ಹಾಸನ	ರೂ. 69.93 ಕೋಟಿ
3.	ಬೆಳಗಾಂ	ರೂ. 50.12 ಕೋಟಿ
4.	ಶಿವಮೊಗ್ಗ	ರೂ. 40.2563 ಕೋಟಿ
5.	ರಾಯಚೂರು	ರೂ. 58.92 ಕೋಟಿ
6.	ಬೀದರ್	ರೂ. 41.15 ಕೋಟಿ

(ಇ) ತಲಾ 100

(ಈ) ವಿವರಗಳು ಈ ಕೆಳಕಂಡಂತಿದೆ:

ಕ್ರ.ಸಂ	ಕಾಲೇಜುಗಳು	ಬೋಧಕ	ಬೋಧಕೇತರ
1	ಮಂಡ್ಯ	184	186
2	ಹಾಸನ	144	230
3	ಬೆಳಗಾಂ	140	58
4	ಶಿವಮೊಗ್ಗ	156	283
5	ರಾಯಚೂರು	130	96
6	ಬೀದರ್	139	187

ಹೌದು

(ಉ) ಹೌದು

(ಊ) ವಿಚಾರಣೆ ಜರುಗಿಸಲಾಯಿತು.

(ಋ) ಎಲ್ಲಾ ಕಾಲೇಜುಗಳಿಗೂ ಎಂ.ಸಿ.ಐ. ಭೇಟಿ ನೀಡಿ ತನ್ನ ಒಪ್ಪಿಗೆಯನ್ನು ನೀಡಿದೆ. ಯಾವುದೇ ಕಾಲೇಜುಗಳ ಬಗ್ಗೆ ದೂರುಗಳು ಸರ್ಕಾರಕ್ಕೆ ಸ್ವೀಕೃತವಾಗಿಲ್ಲ.

216 ಶ್ರೀ ಹ್ಯಾರಿಸ್ ಎನ್.ಎ :– ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ರಾಜ್ಯದಲ್ಲಿರುವ ಮೆಡಿಕಲ್ ಕಾಲೇಜುಗಳಲ್ಲಿ ಲಭ್ಯವಿರುವ ಸೀಟುಗಳ ಸಂಖ್ಯೆ ಎಷ್ಟು; ಕಾಲೇಜುವಾರು ವಿವರ ನಿಡುವುದು;

(ಆ) ಲಭ್ಯವಿರುವ ಸೀಟುಗಳಲ್ಲಿ ಸರ್ಕಾರದ ಪಾಲು ಎಷ್ಟು; ಕಾಲೇಜು ಮೆನೇಜ್‌ಮೆಂಟ್ ಪಾಲು ಎಷ್ಟು;

(ಇ) ಸಿ.ಇ.ಟಿ. ಮತ್ತು ಕಾಮೇಡ್–ಕೆ ಹಾಗೂ ಮೆನೇಜ್‌ಮೆಂಟ್ ಮುಖಾಂತರ ಭರ್ತಿಯಾದ ಸೀಟುಗಳ ಸಂಖ್ಯೆ ಎಷ್ಟು;

(ಈ) ಭರ್ತಿಯಾಗದೆ ಉಳಿದ ಸೀಟುಗಳ ಸಂಖ್ಯೆ ಎಷ್ಟು;

(ಉ) ರಾಜ್ಯದಲ್ಲಿ ವೈದ್ಯಕೀಯ ಶಿಕ್ಷಣವನ್ನು ಸಿ.ಇ.ಟಿ. ಮೂಲಕ ಪಡೆದುಕೊಂಡ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; (ಎರಡು ವರ್ಷಗಳ ವಿವರ ನೀಡುವುದು)?